ಈಗ ಇರತಕ್ಕ ಪದ್ಧತಿಯೇ ಮುಂದುವರೆಯುತ್ತದೆ.

ಶ್ರೀ ಕೆ. ವಿ. ರವೀಂದ್ರನಾಥ ಬಾಬು : ಹಳ್ಳಿಗಳಲ್ಲಿ ಲಿಫ್ಟ್ ಇರಿಗೇಶನ್ ಸ್ಕೀಮ್ಸ್ ಮತ್ತು ಗಂಗಾ ಕಲ್ಯಾಣ ಯೋಜನೆ ಬರೀ ಬಡವರಿಗಾಗಿ ಮಾಡಿರತಕ್ಕದ್ದು, ಇದರಲ್ಲೆಲ್ಲಾ, ಪಂಪುಸೆಟ್ಟುಗಳು 10 ಹೆಚ್‌ಪಿಗಿಂತ ಜಾಸ್ತಿ ಇರುತ್ತವೆ. ತಾವು ಅವುಗಳಿಗೆ ಎಕ್ಸಂಪ್‌ಶನ್ ಕೊಡುತ್ತೀರಾ ಅಥವಾ ಮಿಟರ್ ಫಿಕ್ಸ್ ಮಾಡುತ್ತೀರಾ?

ಶ್ರೀ ಎಸ್. ಎಂ. ಕೃಷ್ಣ : ಈಗ ಎಕ್ಸಂಪ್‌ಶನ್ ಇರತಕ್ಕದ್ದು ಕೇವಲ ಪಂಪುಸೆಟ್ಟುಗಳಿಗೆ ಮಾತ್ರ.

ಶ್ರೀ ಕೆ. ವಿ. ರವೀಂದ್ರನಾಥ ಬಾಬು : ಗಂಗಾ ಕಲ್ಯಾಣ ಯೋಜನೆಯಲ್ಲಿ ಪಂಪುಸೆಟ್ಟುಗಳು ಇವೆ. ಲಿಫ್ಟ್ ಇರಿಗೇಶನ್‌ನಲ್ಲಿಯೂ ಸಹ ಪಂಪುಸೆಟ್ಟುಗಳು ಇವೆ. 15-20 ಮಂದಿ ಬಡವರಿಗೆ ಈ ನೀರಾವರಿ ಕೊಟ್ಟಿರತಕ್ಕ ವ್ಯವಸ್ಥೆ ಇದೆ. ಆದ್ದರಿಂದ ಈ ಪಂಪುಸೆಟ್ಟುಗಳು 10 ಹೆಚ್‌ಪಿಗಿಂತ ಜಾಸ್ತಿ ಇರುತ್ತದೆ. ಅದಕ್ಕಾಗಿ ತಾವು ಎಕ್ಸಂಪ್‌ಶನ್ ಕೊಡಬೇಕಾಗುತ್ತದೆ. ತಾವು ಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ : ಗಂಗಾ ಕಲ್ಯಾಣ ಯೋಜನೆಯಲ್ಲಿ ಕೇವಲ 10 ಅಶ್ವಶಕ್ತಿ ಕೆಳಗೆ ಮೋಟಾರ್ ಇದ್ದರೆ ಮಾತ್ರ ಅದಕ್ಕೆ ಅನ್ವಯವಾಗುತ್ತದೆ.

ಶ್ರೀ ಬಿ. ಶಿವರಾಮು : ಗಂಗಾ ಕಲ್ಯಾಣ ಯೋಜನೆಯಲ್ಲಿ ಪಂಪುಸೆಟ್ಟುಗಳು 10 ಹೆಚ್‌ಪಿ ಇರತಕ್ಕಂಥಾದ್ದಕ್ಕೂ ಕೂಡ ಇಲ್ಲಿಯವರೆಗೆ ಎಕ್ಸಂಪ್‌ಶನ್ ಕೊಟ್ಟಿಲ್ಲ. ಜಿಲ್ಲಾಪರಿಷತ್ತಿನವರೂ ಅದನ್ನು ಮೇಂಟೇನ್ ಮಾಡದೆ ಕೆಲವು ಕಡೆ ಕಿತ್ತು ಹಾಕಿದ್ದಾರೆ. ಗಂಗಾ ಕಲ್ಯಾಣ ಯೋಜನೆ ಇರತಕ್ಕದ್ದು ಶೇಕಡಾ 90ರಷ್ಟು ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ನನ್ನ ಕ್ಷೇತ್ರದಲ್ಲಿ 3-4 ಗಂಗಾಕಲ್ಯಾಣ ಯೋಜನೆಗಳಲ್ಲಿ ಮಿಟರನ್ನು ಕಿತ್ತು ಹಾಕಿದ್ದಾರೆ. 6 ತಿಂಗಳಿಂದ ನೀರಿಲ್ಲ. 10 ಹೆಚ್.ಪಿ.ಗಿಂತ ಕಡಿಮೆ ಇದ್ದರೆ ಮಿಟರ್ ಫಿಕ್ಸ್ ಮಾಡುವುದಿಲ್ಲ ಎಂದು ಹೇಳಿದ್ದೀರಿ. ಆದರೆ ಅದು ಈಗ ಅನುಷ್ಠಾನದಲ್ಲಿ ಇಲ್ಲ. ಕೂಡಲೇ ಅದನ್ನು ಅನುಷ್ಠಾನಕ್ಕೆ ತರುತ್ತೀರಾ ಎಂದು ಕೇಳುತ್ತೇನೆ?

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ಸದಸ್ಯರು ಏನು ನನ್ನ ಗಮನ ಸೆಳೆದಿದ್ದಾರೆ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ವಿಷಯಃ ಕೃಷ್ಣ ಮೇಲ್ದಂಡೆ ಯೋಜನೆ ಪ್ರಾಥಮಿಕ ಅಂದಾಜು.

Q : 344

ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಪ್ರಾಥಮಿಕ ಅಂದಾಜು ವೆಚ್ಚ ಎಷ್ಟು ?

ಆ) ಈಗ ಭಾರತ ಸರ್ಕಾರದ ಯೋಜನಾ ಆಯೋಗವು ಪ್ರಥಮ ಹಂತವಾಗಿ ಎಷ್ಟು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲು ಅನುಮೋದಿಸಿದೆ?

ಇ) ಈ ಯೋಜನೆಯ ಮೊದಲನೇ ಹಂತದಲ್ಲಿ ಎಷ್ಟು ಹೆಕ್ಟೇರ್ ಪ್ರದೇಶ ನೀರಾವರಿ ಮಾಡಲಾಗುವುದು?

ಈ) ಮೊದಲನೆ ಹಂತವನ್ನು ಚುರುಕುಗೊಳಿಸಲು ಸರ್ಕಾರವು ಕೈಗೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) 58.20 ಕೋಟಿ ರೂ.ಗಳು.

ಆ) 1214.97 ಕೋಟಿ ರೂ.ಗಳ ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ಪರಿಷ್ಕೃತ ಅಂದಾಜಿಗೆ ಯೋಜನಾ ಆಯೋಗವು 1990ರಲ್ಲಿ ಅಂಗೀಕಾರ ನೀಡಿರುತ್ತದೆ.

ಇ) ಮೊದಲ ಘಟ್ಟದ ಈ ಯೋಜನೆಯಿಂದ 4.25 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗುತ್ತದೆ.

ಈ) ಮೊದಲ ಘಟ್ಟದ ಯೋಜನೆಯನ್ನು ಹಂತ ಹಂತವಾಗಿ ನಿರ್ಮಾಣ ಮಾಡಲಾಗುತ್ತಿದ್ದು, ಯೋಜನೆಯನ್ನು ತ್ವರಿತಗೊಳಿಸುವ ದೃಷ್ಟಿಯಿಂದ ಮೊದಲ ಮತ್ತು 2ನೇ ಹಂತದ ಯೋಜನೆಗಳಿಗೆ ವಿಶ್ವ ಬ್ಯಾಂಕಿನ ನೆರವು ಪಡೆಯಲಾಗಿದೆ.

ಶ್ರೀ ಜಿ. ರಾಜು ಗೌಡ : ಮಾನ್ಯ ಅಧ್ಯಕ್ಷರೇ, ಯೋಜನಾ ಆಯೋಗ 1990ರಲ್ಲಿ 1214.97 ಕೋಟಿ ರೂಪಾಯಿಗಳ ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ಪರಿಷ್ಕೃತ ಅಂದಾಜಿಗೆ ಅಂಗೀಕಾರ ನೀಡಿತು. ಆ ಅಂಗೀಕಾರ ನೀಡಿದ ಮೇಲೆ 1990-91, 1991-92, ಹಾಗೂ 1992-93ರಲ್ಲಿ ನೀರಾವರಿ ಒದಗಿಸಲು ನಿಗದಿಪಡಿಸಿದ ಗುರಿ ಎಷ್ಟು? ಸಾಧನೆ ಎಷ್ಟು? ಪ್ರಗತಿ ಎಷ್ಟು ಹಾಗೂ ಮಾಡಿರತಕ್ಕ ವೆಚ್ಚ ಎಷ್ಟು ? ಇದರಿಂದ ಪ್ರತಿಯೊಂದು ಹೆಕ್ಟೇರಿಗೆ ಸರಾಸರಿ ಎಷ್ಟು ವೆಚ್ಚ ಮಾಡಿದ ಹಾಗಾಗಿದೆ ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ : 1963ರಲ್ಲಿ ಇದರ ಮೂಲ ಅಂದಾಜು 58 ಕೋಟಿ ರೂಪಾಯಿಗಳಲ್ಲಿ 1968ರಲ್ಲಿ 75 ಕೋಟಿ ರೂಪಾಯಿಯಾಯಿತು. 1985ರಲ್ಲಿ 1071 ಕೋಟಿಯಾಯಿತು. ಈಗ 1990 ಕೋಟಿ ಎಂದು ಫಸ್ಟ್‌ಸ್ಟೇಜ್‌ಗೆ ಅಂದಾಜು ಮಾಡಲಾಗಿದೆ.

ಶ್ರೀ ಜಿ. ರಾಜುಗೌಡ : 1990-91, 1991-92, 1992-93ರಲ್ಲಿ ತಾವು ಅಂದಾಜು ವೆಚ್ಚ ಮಾಡಿದ ನಂತರ ಏನು ಗುರಿ ಇಟ್ಟುಕೊಂಡಿದ್ದೀರಿ, ಆ ಗುರಿ ಮುಟ್ಟಿದ್ದೀರ. ಅದಕ್ಕಾಗಿ ತಾವು ಮಾಡಿದಂಥ ವೆಚ್ಚ ಎಷ್ಟು? ಆ ರೀತಿ ವೆಚ್ಚ ಮಾಡಿದಾಗ ಪ್ರತಿಯೊಂದು ಹೆಕ್ಟೇರ್‌ಗೆ ಸರಾಸರಿ ಎಷ್ಟು ವೆಚ್ಚ ಮಾಡಿದಂತಾಗುತ್ತದೆ. ಇದಕ್ಕಾಗಿ

ವಿಶ್ವಬ್ಯಾಂಕ್‌ನಿಂದ ಬಂದಂಥ ನೆರವು ಎಷ್ಟು ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ : ವಿಶ್ವಬ್ಯಾಂಕಿನಿಂದ 1978ರಿಂದ 86ರವರೆಗೆ ಸುಮಾರು 117 ಮಿಲಿಯನ್ ಡಾಲರ್ ಬಂದಿದೆ. ಅದನ್ನು ನಾವು ಸಂಪೂರ್ಣವಾಗಿ ಬಳಸಿಕೊಂಡಿದ್ದೇವೆ. 1989ರ ಅಗ್ರಿಮೆಂಟ್ ಪ್ರಕಾರ 96ರವರೆಗೆ 325 ಮಿಲಿಯನ್ ಡಾಲರ್ ಅವರು ನಮಗೆ ಕೊಡಬೇಕೆಂದು ಹೇಳಿ ಒಪ್ಪಂದವಾಗಿದೆ. ಅದನ್ನು ಈಗ ನಾವು ಖರ್ಚು ಮಾಡುತ್ತಿದ್ದೇವೆ.

ಶ್ರೀ ಜಿ. ರಾಜುಗೌಡ : ಎರಡು ಸಾವಿರ ವರ್ಷದ ಒಳಗೆ ಬಚಾವತ್ ಅವಾರ್ಡ್ ಪ್ರಕಾರ ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳಲು ಸರ್ಕಾರಕ್ಕೆ ಸಾಮರ್ಥ್ಯವಿದೆಯೆ? ಆಯವ್ಯಯದಲ್ಲಿ ಅದಕ್ಕೆ ಹೆಚ್ಚಿನ ಹಣವನ್ನು ಒದಗಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆಯೆ?

ಶ್ರೀ ಎಸ್. ಎಂ. ಕೃಷ್ಣ : ಸದನದ ಒಟ್ಟಾರೆ ಅಭಿಪ್ರಾಯ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ನಮ್ಮ ರಾಜ್ಯಕ್ಕೆ ಎಷ್ಟು ನೀರನ್ನು ಗುರುತಿಸಿದ್ದಾರೆ ಆ ನೀರು ಎಲ್ಲವನ್ನು ಉಪಯೋಗಿಸಿಕೊಳ್ಳಬೇಕು ಎನ್ನತಕ್ಕದ್ದು ಸರ್ಕಾರದ ನಿರ್ಧಾರ ಹಾಗೂ ಈ ಸದನದ ಒಟ್ಟಾರೆ ನಿರ್ಧಾರ. ಅದಕ್ಕಾಗಿ ಇಂತಹ ಒಂದು ದೊಡ್ಡ ಬೃಹತ್ ಪ್ರಮಾಣದಲ್ಲಿ ಕಾರ್ಯ ಕೈಗೆತ್ತಿಕೊಂಡಾಗ ಪ್ರಾಮುಖ್ಯವಾಗಿ ನಮಗೆ ಬರತಕ್ಕಂಥ ಅಡ್ಡಿ ಆತಂಕಗಳು ಏನು ಎಂದರೆ ಅದಕ್ಕೆ ಬೇಕಾಗುವಂಥ ಸಂಪನ್ಮೂಲಗಳನ್ನು ಒದಗಿಸಿಕೊಡತಕ್ಕದ್ದು. ಈ ಸಂಪನ್ಮೂಲಗಳನ್ನು ಒದಗಿಸಿಕೊಡತಕ್ಕ ಭೂಮಿಗೆ ಸನ್ನಿವೇಶ ಸಿದ್ಧವಾದರೆ ನಮ್ಮಲ್ಲಿ ಇರತಕ್ಕ ಇಂಜಿನಿಯರಿಂಗ್ ಪರಿಣತಿ ಏನಿದೆ, ಮ್ಯಾನ್‌ಪವರ್ ಏನು ಇದೆ ಮತ್ತು ಅದಕ್ಕೆ ಬೇಕಾಗುವಂಥ ಇಕ್ವಿಪ್‌ಮೆಂಟ್ಸ್ ಮೆಶೀನ್‌ಗಳು. ಇವುಗಳು ಏನು ಬೇಕು. ಅವೆಲ್ಲವೂ ಇವೆ. ನಾವು ಪ್ರೊಕ್ಯೂರ್ ಮಾಡಿಕೊಳ್ಳಬಹುದು ಮತ್ತು ನಮ್ಮ ಮ್ಯಾನ್‌ಪವರನ್ನು ಈ ಒಂದು ಉದ್ದೇಶಕ್ಕೆ ನಾವು ಅದನ್ನು ಚೌಕಟ್ಟಿಗೆ ತರಬಹುದು. ಪ್ರಧಾನವಾಗಿರುವುದು ಸಂಪನ್ಮೂಲಗಳು. ಆ ಸಂಪನ್ಮೂಲಗಳು ನಮಗೆ ದೊರಕುವ ಗತಿಯ ಮೇಲೆ ನಮ್ಮ ಮಹಾ ಪ್ರಯತ್ನ ನಿರ್ಧಾರವಾಗುತ್ತದೆ.

ವಿಷಯ : ತುಂಗಾ ಮೇಲ್ದಂಡೆ ನೀರಾವರಿ ಯೋಜನೆ ಮಂಜೂರಾತಿ.

Q : 1279

ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಂಗಾ ಮೇಲ್ದಂಡೆ ನೀರಾವರಿ ಯೋಜನೆ ಒಂದು ತಿಂಗಳೊಳಗಾಗಿ ಕೇಂದ್ರ ಸರ್ಕಾರದಿಂದ ಮಂಜೂರಾತಿ ಪಡೆಯುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ಭರವಸೆ ನೀಡಿದ ಪ್ರಕಾರ ಮಂಜೂರಾತಿ ಪಡೆಯಲಾಗಿದೆಯೇ?